

ಹೇಳು? ನನ್ನನ್ನ ಇಲ್ಲಿಗೆ ಕರೆಸೋದು ಬ್ಯಾಡಿತ್ತು. ಫೋನಲ್ಲೇ ಕೇಳಿದ್ರೆ ಹೇಳ್ತಿರ್ತಿದ್ದೆ. ಬದುಕು ಅನ್ನೋದು ಒಂದೆರಡು ವರ್ಷದ್ದೇನಮ್ಮಾ... ಅಜ್ಜ- ಅಜ್ಜಿ ಕೂಡ, ಯಾವಾಗ್ಲೂ ನಿನ್ನ ಬಗ್ಗೆ ತುಂಬಾ ಸಂಕಟ ಪಟ್ಕೋತಾ ಇದ್ರು. ಇನ್ನು ಈ ವಿಷಯ ಗೊತ್ತಾದ್ರೆ ಅವ್ರಂತೂ ಸಖತ್ ಖುಷಿ ಆಗ್ತಾರೆ! ಅಮ್ಮ, I'm the first to congratulate you! ಹೇಗೂ ಅಜ್ಜನ ಜೊತೆ ಊರಿಗೆ ಹೊರಟಿದೀನಲ್ಲ, ಆವಾಗ ಅವನಿಗೆ ನಾನೇ ಎಲ್ಲವನ್ನೂ ಹೇಳ್ತೀನಿ... ಊರಿಗೆ ಹೋಗಿ ಅಲ್ಲೇ ಇರಬೇಕು ಅನ್ನೋ ಅವರ ನಿರ್ಧಾರ ಸ್ವಲ್ಪದಿನ ಮುಂದಕ್ಕೆ ಹೋಗಬಹುದು ಅಷ್ಟೆ!

**ಮಾದೇವ, ಮುರಳೀಧರನಿಗೆ:**

ಮುರಳಿ, ನೀನು ಇಲ್ಲೇ ಮನೇ ಕಟ್ಟಿಸ್ತೀಯ, ಇಲ್ಲೇ ಬಂದು ಇರ್ತೀಯ ಅಂದ್ರೆ ಅದಕ್ಕಿಂತ ಒಳ್ಳೇ